Shikshan Sanshodhan : Journal of Arts, Humanities and Social Sciences ISSN: 2581-6241 Volume - 3, Issue - 4, July-Aug – 2020
Bi-Monthly, Peer-Reviewed, Refereed, Indexed Journal Impact Factor: 3.589
Received on : 08/08/2020 Accepted on : 24/08/2020 Publication Date: 31/08/2020

ಶಾಸನಗಳಲ್ಲಿ ಆದಿಲ್‌ಶಾಹಿ ಕಾಲದ ಬುರ್ಜ್‌ಗಳು

[1] ನಾಜೀಯಾಬೇಗಂ. ಎನ್

ಸಂಶೋಧನಾ ವಿದ್ಯಾರ್ಥಿ
ಡಾ. ಆರ್.ಸಿ.ಹೀರೆಮಠ ಕನ್ನಡ ಅಧ್ಯಯನ ಪೀಠ
ಕರ್ನಾಟಕ ವಿಶ್ವವಿದ್ಯಾಲಯ, ಪಾವಟೆ ನಗರ
ಜಿಲ್ಲೆ : ಧಾರವಾಡ, ರಾಜ್ಯ : ಕರ್ನಾಟಕ
Email : najiyabegum.ik@gmail.com

[2.] ಡಾ. ಪಂಡಿತ ಕೆ. ರಾಠೋಡ

ಸಹಾಯಕ ಪ್ರಾಧ್ಯಾಪಕರು,
ಡಾ. ಆರ್.ಸಿ.ಹೀರೆಮಠ ಕನ್ನಡ ಅಧ್ಯಯನ ಪೀಠ
ಕರ್ನಾಟಕ ವಿಶ್ವವಿದ್ಯಾಲಯ, ಪಾವಟೆ ನಗರ
ಜಿಲ್ಲೆ : ಧಾರವಾಡ, ರಾಜ್ಯ : ಕರ್ನಾಟಕ
Email : drpanditrathod@gmail.com

Abstract: ಶಾಸನಗಳಲ್ಲಿ ಆದಿಲ್‌ಶಾಹಿ ಕಾಲದ ಬುರ್ಜ್‌ಗಳು ಎಂಬ ಶೀರ್ಷಿಕೆಯಡಿಯಲ್ಲಿ ಪ್ರಸ್ತುತ ಲೇಖನವನ್ನು ಕೈಗೆತ್ತಿಕೊಳ್ಳಲಾಗಿದೆ. ದಕ್ಕನ್‌ನಲ್ಲಿ ಬುರ್ಜ್ ಎಂಬ ಪದ ಮುಸ್ಲಿಂ ಅರಸರ ಆಳ್ವಿಕೆಯ ಕಾಲದಿಂದ ಪರಿಚಯವಾಗಿದೆ. ಬುರ್ಜ್‌ಗಳಿಗೆ ಕಾವಲು ಗೋಪುರ, ಕೊತ್ತಳ ಎಂತಲೂ ಕರೆಯುತ್ತಾರೆ. ಬಿಜಾಪುರದಲ್ಲಿ ಆದಿಲ್‌ಶಾಹಿ ಸುಲ್ತಾನರು ಕೋಟೆಯ ಜೊತೆಯಲ್ಲಿಯೆ ಎತ್ತರದಲ್ಲಿ ಬುರ್ಜ್‌ಗಳನ್ನು ನಿರ್ಮಾಣ ಮಾಡಿ ಅಲ್ಲಿಯೇ ಫಿರಂಗಿ, ತೋಪುಗಳನ್ನು ಅಳವಡಿಸಿದ್ದಾರೆ. ನಿರ್ಮಾಣ ಮಾಡಿದ ಕಟ್ಟಡಗಳ ವಿಷಯವನ್ನು ಪರ್ಶಿಯನ್, ಅರೇಬಿಕ್, ಉರ್ದು, ಕನ್ನಡ ಮತ್ತು ಮರಾಠಿ ಭಾಷೆಗಳಲ್ಲಿ ಶಾಸನವನ್ನು ಬರೆಸಿದ್ದಾರೆ. ಈ ನನ್ನ ಲೇಖನದಲ್ಲಿ ಬಿಜಾಪುರ ಜಿಲ್ಲೆಯ ಶಾಸನದಲ್ಲಿ ದಾಖಲಾದ ಬುರ್ಜ್‌ಗಳನ್ನು ಮಾತ್ರ ಹೆಸರಿಸಲಾಗುವುದು.

Key Words: ಆದಿಲ್‌ಶಾಹಿ, ಶಾಸನಗಳು, ಬುರ್ಜ್‌ಗಳು, ಬಿಜಾಪುರ.

ಪೀಠಿಕೆ :

ಕ್ರಿ.ಶ. 1489ರಲ್ಲಿ ಯೂಸುಫ್ ಆದಿಲ್‌ಖಾನ್‌ನು ಬಿಜಾಪುರ ಜಿಲ್ಲೆಯನ್ನು ರಾಜಧಾನಿಯನ್ನಾಗಿಸಿ ಆದಿಲ್‌ಶಾಹಿ ಸಾಮ್ರಾಜ್ಯವನ್ನು ಸ್ಥಾಪಿಸಿದನು. ಇವನಿಂದ ಪ್ರಾರಂಭವಾದ ಈ ಸಾಮ್ರಾಜ್ಯದಲ್ಲಿ ಯೂಸುಫ್ ಆದಿಲ್‌ಖಾನ್, ಇಸ್ಮಾಯಿಲ್ ಆದಿಲ್‌ಖಾನ್, ಒಂದನೆ ಇಬ್ರಾಹಿಂ ಆದಿಲ್‌ಶಾಹ, ಒಂದನೆ ಅಲಿ ಆದಿಲ್‌ಶಾಹ, ಎರಡನೆ ಇಬ್ರಾಹಿಂ ಆದಿಲ್‌ಶಾಹ, ಮಹಮ್ಮದ್ ಆದಿಲ್‌ಶಾಹ, ಎರಡನೆ ಅಲಿ ಆದಿಲ್‌ಶಾಹ ಮತ್ತು ಸಿಕಂದರ್ ಆದಿಲ್‌ಶಾಹ ಹೀಗೆ ಒಟ್ಟು ಒಂಭತ್ತು ಜನ ಸುಲ್ತಾನರು ಸುಮಾರು ಎರಡುನೂರು ವರ್ಷಗಳ ಕಾಲ ರಾಜ್ಯಭಾರ ಮಾಡಿ ಹೋಗಿದ್ದಾರೆ. ತಮ್ಮ ಅಧಿಕಾರಾವಧಿಯಲ್ಲಿ ಅನೇಕ ಧಾರ್ಮಿಕ ಮತ್ತು ಧಾರ್ಮಿಕೇತರ ಕಟ್ಟಡಗಳನ್ನು ಕಟ್ಟಿಸಿ ಅದರ ನಿರ್ಮಾಣದ ಅರಸನ ಹೆಸರು, ಕಾಲ, ಕರ್ತೃ, ಕಾರಣ ಹೀಗೆ ಹಲವಾರು ಅಂಶಗಳನ್ನು ಶಾಸನಗಳಲ್ಲಿ ದಾಖಲಿಸಿದ್ದಾರೆ. ಈ ಶಾಸನಗಳು ನಮಗೆ ಹೆಚ್ಚಾಗಿ ಪರ್ಶಿಯನ್, ಅರೇಬಿಕ್ ಮತ್ತು ಉರ್ದು ಭಾಷೆಯಲ್ಲಿ ಸಿಗುತ್ತವೆ. ಅಲ್ಲದೆ ಕನ್ನಡ ಮತ್ತು ಮರಾಠಿ ಭಾಷೆಗಳಲ್ಲಿಯು ಸಹ ಶಾಸನಗಳು ರಚಿತವಾಗಿವೆ. ಇವರ ಆಳ್ವಿಕೆಯ ಕಾಲದಲ್ಲಿ ಇವರ ರಾಜ್ಯವು ಕರ್ನಾಟಕದ ಬೀದರ್, ಗುಲ್ಬರ್ಗಾ, ರಾಯಚೂರ್, ಧಾರವಾಡ, ಬೆಳಗಾವಿ, ಕಾರವಾರ, ಕೊಪ್ಪಳ, ತಮಕೂರು, ಕೋಲಾರ, ಬೆಂಗಳೂರು, ಆಂಧ್ರಪ್ರದೇಶ, ತಮಿಳುನಾಡು ಹಾಗೂ ಮಹಾರಾಷ್ಟ್ರದವರೆಗೂ ರಾಜ್ಯ ವಿಸ್ತಾರಗೊಂಡಿತ್ತು. ಇಲ್ಲೆಲ್ಲ ತಮ್ಮ ರಾಜ್ಯಭಾರಮಾಡಿ ಕಟ್ಟಡಗಳನ್ನು ವಶಪಡಿಸಿಕೊಳ್ಳುವುದು ಹಾಗೆಯೇ ಅದರ ಜೀರ್ಣೋದ್ಧಾರ, ಹೊಸ ಕಟ್ಟಡಗಳ ನಿರ್ಮಾಣ ಮಾಡಿಸಿದ್ದನ್ನು ಇತಿಹಾಸದಲ್ಲಿ ಅಧ್ಯಯನ ಮಾಡುತ್ತೇವೆ. ಇವರು ವಿಶ್ವವೇ ಮೆಚ್ಚುವಂತೆ ಕರ್ನಾಟಕಕ್ಕೆ ವಿಶೇಷವಾದ ವಾಸ್ತು–ಶಿಲ್ಪದ ಕೊಡುಗೆಯನ್ನು ನೀಡಿದ್ದಾರೆ. ಇವರು ಕಟ್ಟಿಸಿದ ಜುಮ್ಮಾ ಮಸೀದಿ, ವಿಶ್ವ ಪ್ರಸಿದ್ಧ ಗೋಲಗುಮ್ಮಟ, ಇಬ್ರಾಹಿಂ ರೋಜಾ, ಬಾರಾ ಕಮಾನ್, ಉಪಲಿ ಬುರ್ಜ್, ಮಲ್ಲಿಕ್ ಮೈದಾನ್ ತೋಪು, ತಾಜ್ ಬಾವಡಿ, ಬೇಗಂ ತಲಾಬ್ ಹೀಗೆ ಹಲವಾರು ಕಟ್ಟಡಗಳನ್ನು ರಾಜ್ಯದ ಹಲವು ಜಿಲ್ಲೆಗಳಲ್ಲಿ ಕಟ್ಟಿಸಿದ್ದು ಈ ಎಲ್ಲಾ ಕಟ್ಟಡಗಳು ಇಂದು ನಾಡಿನೆಲ್ಲಾ ಜನರ ಮೆಚ್ಚುಗೆಯ ಪ್ರವಾಸಿ ತಾಣಗಳಾಗಿದ್ದಾವೆ.

ಬುರ್ಜ್‌ಗಳು ಕೊತ್ತಲಗಳಾಗಿದ್ದು ಇವನ್ನು ಕೋಟೆಯಲ್ಲಿಯೇ ದುಂಡಾಕಾರವಾಗಿ ಎತ್ತರದಲ್ಲಿ, ಬಹು ಭುಜಾಕೃತಿಯಲ್ಲಿ, ಅರ್ಧ ವೃತ್ತಾಕಾರದಲ್ಲಿ ಹೀಗೆ ಅನುಕೂಲಕ್ಕೆ ತಕ್ಕಂತೆ ಕಟ್ಟಿರುತ್ತಾರೆ, ಹಾಗೆಯೇ ಇದರ ಜೊತೆಯಲ್ಲಿಯೇ ಫಿರಂಗಿ, ತೋಪುಗಳನ್ನು ಸಹ ನಿರ್ಮಾಣಮಾಡಿದ್ದಾರೆ. ಬಿಜಾಪುರದ ಕೋಟೆಯನ್ನು ಸುಲ್ತಾನರು ಶತ್ರುಗಳ ವಿರುದ್ಧದಿಂದ ರಾಜ್ಯದ

ರಕ್ಷಣೆಗಾಗಿ ಊರಿನ ಸುತ್ತ ಗಟ್ಟಿಯಾಗಿ ಕಟ್ಟಿ ಅದಕ್ಕೆ ಆರು ಮುಖ್ಯಬಾಗಿಲುಗಳಾದ ಮೆಕ್ಕಾ ದರ್ವಾಜ, ಶಹಾಪುರ ದರ್ವಾಜ, ಬಹಮನಿ ದರ್ವಾಜ, ಅಲ್ಲಾಪುರ ದರ್ವಾಜ, ಫತೇ ದರ್ವಾಜ ಮತ್ತು ಮನಗೊಳಿ ದರ್ವಾಜಗಳನ್ನು ನಿರ್ಮಾಣ ಮಾಡಿದ್ದಾರೆ. ಹಾಗೆಯೇ ಕೋಟೆಯ ಗೋಡೆಗೆ ಬುರ್ಜ್‌ಗಳನ್ನು ನಿರ್ಮಾಣ ಮಾಡಿದ್ದಾರೆ. ಆದಿಲ್‌ಶಾಹಿರವರು ತಮ್ಮ ಆಳ್ವಿಕಾವಧಿಯಲ್ಲಿ ಸುಮಾರು 100ಕ್ಕಿಂತ ಹೆಚ್ಚು ಬುರ್ಜ್‌ಗಳನ್ನು ಕಟ್ಟಿಸಿದ್ದಾರೆ. ತಮ್ಮ ಅಧೀನದಲ್ಲಿರುವ ವಿವಿಧ ಪ್ರದೇಶಗಳಲ್ಲಿಯೂ ಬುರ್ಜ್‌ಗಳನ್ನು ಕಟ್ಟಿಸಿದ್ದಾರೆ. ಆದರೆ ಈ ಲೇಖನದಲ್ಲಿ ಕೇವಲ ಬಿಜಾಪುರ ಜಿಲ್ಲೆಯ ಶಾಸನಗಳಲ್ಲಿ ದಾಖಲಾಗಿರುವ ಬುರ್ಜ್‌ಗಳ ಕುರಿತು ಮಾತ್ರ ವಿಷಯ ಬರೆಯ ಹೊರಟಿದ್ದೇನೆ.

ಅರಸರ ಕಿರು ಪರಿಚಯ :

1. ಯೂಸುಫ್ ಆದಿಲ್‌ಖಾನ್

ಬಿಜಾಪುರದ ಆದಿಲ್‌ಶಾಹಿ ಸಾಮ್ರಾಜ್ಯದ ಸ್ಥಾಪಕ ಯೂಸುಫ್ ಆದಿಲ್‌ಖಾನ್. ಕಾನ್ಸಟೆಂಟಿನೋಪಲ್‌ನಿಂದ ಮಹರಾಷ್ಟ್ರದ ದಾಭೋಲ್ ಬಂದರಿಗೆ ಬಂದಿಳಿದು ಅಲ್ಲಿಂದ ಬೀದರ್‌ನ್ನು ರಾಜಧಾನಿಯನ್ನಾಗಿಸಿಕೊಂಡ ಬಹಮನಿ ಸುಲ್ತಾನರ ಸಾಮ್ರಾಜ್ಯದಲ್ಲಿ ಮಹಮ್ಮದ್ ಗವಾನ್‌ನ ಆಳ್ವಿಕಾವಧಿಯಲ್ಲಿ ಸೇವಕನಾಗಿ ಕಾರ್ಯ ನಿರ್ವಹಿಸಿದನು. ಅಲ್ಲಿಂದ ಕ್ರಿ.ಶ. 1489ರಲ್ಲಿ ಬಿಜಾಪುರಕ್ಕೆ ಬಂದು ಸ್ವತಂತ್ರವಾದ ಸಾಮ್ರಾಜ್ಯವನ್ನು ಕಟ್ಟಿಕೊಂಡು ಆದಿಲ್‌ಶಾಹಿ ವಂಶದ ಸ್ಥಾಪಕನಾದನು. ಇವನು ಕ್ರಿ.ಶ. 1489 ರಿಂದ ಕ್ರಿ.ಶ. 1510ರ ವರೆಗೆ ಆಳ್ವಿಕೆ ನಡೆಸಿದನು.

2. ಇಸ್ಮಾಯಿಲ್ ಆದಿಲ್‌ಖಾನ್

ಯೂಸುಫ್ ಆದಿಲ್‌ಖಾನ್‌ನ ಮಗ ಇಸ್ಮಾಯಿಲ್ ಆದಿಲ್‌ಖಾನ್ ಇವನು ಕ್ರಿ.ಶ. 1510ರಲ್ಲಿ ಸಿಂಹಾಸನವೇರಿದಾಗ ಇವನಿಗೆ ಕೇವಲ 13ವರ್ಷವಾಗಿತ್ತು. ಕಮಾಲ್‌ಖಾನ್ ಇವನ ರಾಜಪ್ರತಿನಿಧಿಯಾಗಿ ನೇಮಕಗೊಂಡಿದ್ದನು. ಇವನು ಕ್ರಿ.ಶ. 1510 ರಿಂದ ಕ್ರಿ.ಶ. 1534ರ ವರೆಗೆ ರಾಜ್ಯಭಾರ ಮಾಡಿದ್ದಾನೆ.

3. ಮಲ್ಲು ಆದಿಲ್‌ಖಾನ್

ಇಸ್ಮಾಯಿಲ್ ಆದಿಲ್‌ಖಾನ್ ತನ್ನ ಅಂತ್ಯಕಾಲದಲ್ಲಿ ಮಲ್ಲು ಆದಿಲ್‌ಖಾನ್‌ನು ಸಿಂಹಾಸನದ ಮೇಲೆ ಕೋರಿಸಬೇಕೆಂದು ಹೇಳಿದನು. ಅದರಂತೆ ಇವನ ಮರಣದ ನಂತರ ಇವನ ಇಚ್ಛೆಯಂತೆ ಅಧಿಕಾರ ಹಸ್ತಾಂತರಿಸಲಾಯಿತು. ಆದರೆ ಇವನ ಬೇಜಬ್ದಾರಿತನದಿಂದ ಅಧಿಕಾರ ಮುಂದುವರೆಸುಕೊಂಡು ಹೋಗುವಲ್ಲಿ ವಿಫಲನಾದನು. ಇದನ್ನು ಅರಿತ ಇಸ್ಮಾಯಿಲ್‌ನ ತಾಯಿ ಬುನಾನಿ ಖಾತೂನ್ ಅಸಾದ್‌ಖಾನ್‌ನ ಆದೇಶದ ಮೇರೆಗೆ ಇವನಿಂದ ಅಧಿಕಾರ ಕಸಿದುಕೊಂಡಳು. ಕೇವಲ ಕೆಲವೇ ತಿಂಗಳುಗಳ ಕಾಲ ಇವನು ಅರಸನಾಗಿದ್ದನು.

4. ಒಂದನೆ ಇಬ್ರಾಹಿಂ ಆದಿಲ್‌ಶಾಹ

ತನ್ನ ಹೆಸರಿನೊಂದಿಗೆ ಶಾಹ ಎಂಬ ಬಿರುದನ್ನು ಸೇರಿಸಿಕೊಂಡವನು ಒಂದನೆ ಇಬ್ರಾಹಿಂ ಆದಿಲ್‌ಶಾಹ. ಇವನು ತನ್ನ ಆಳ್ವಿಕೆ ಅವಧಿಯಲ್ಲಿ ಪರ್ಶಿಯನ್ ಭಾಷೆಯ ಜೊತೆಗೆ ಉರ್ದು ಭಾಷೆಯನ್ನು ಜಾರಿಗೆ ತಂದನು. ಕನ್ನಡ ಮತ್ತು ಮರಾಠಿ ಭಾಷೆ ಆಡಳಿತ ಭಾಷೆಯಾಗಿತ್ತು. ಇವನು ಕ್ರಿ.ಶ. 1534 ರಿಂದ 1557ರ ವರೆಗೆ ಆಳ್ವಿಕೆ ಮಾಡಿದನು.

5. ಒಂದನೇ ಅಲಿ ಆದಿಲ್‌ಶಾಹ

ಇವನು ಕ್ರಿ.ಶ. 1557ರಲ್ಲಿ ಸಿಂಹಾಸನವನ್ನೇರಿದನು. ಇವನ ಆಳ್ವಿಕೆ ಅವಧಿಯಲ್ಲಿ ಹೆಸರಾಂತ ತಾಳಿಕೋಟೆ ಯುದ್ಧ ವಿಜಯನಗರದ ಅಳಿಯ ರಾಮರಾಯನ ವಿರುದ್ಧ ನಡೆಯುತ್ತದೆ. ಈ ಯುದ್ಧದಲ್ಲಿ ಅಲಿ ಆದಿಲ್‌ಶಾಹ ವಿಜಯಿಯಾದನು. ಅಹಮದ್ ನಗರದ ನಿಜಾಮ್‌ಶಾಹಿಯ ಮಗಳು ಚಾಂದ್‌ಬೀಬಿಯ ಜೊತೆ ಅಲಿ ಆದಿಲ್‌ಶಾಹನ ಮದುವೆ ಆಗಿತ್ತು. ಇವನು ಕ್ರಿ.ಶ. 1157 ರಿಂದ 1580ರ ವರೆಗೆ ರಾಜ್ಯಭಾರ ಮಾಡಿದನು.

6. ಎರಡನೆ ಇಬ್ರಾಹಿಂ ಆದಿಲ್‌ಶಾಹ

ಜಗದ್ಗುರು ಬಾದಷಾಹ ಎಂದೇ ಪ್ರಸಿದ್ಧಿಯಾದ ಎರಡನೆ ಇಬ್ರಾಹಿಂ ಆದಿಲ್‌ಶಾಹ ಧಾರ್ಮಿಕ ಸಹಿಷ್ಣುವಾಗಿದ್ದ. ಇವನು ಸಾಹಿತ್ಯ ಸಂಗೀತದ ಬಗ್ಗೆ ಅಪಾರವಾದ ಆಸಕ್ತಿ ಹೊಂದಿದ್ದ. ದಕ್ಖನಿ ಉರ್ದು ಭಾಷೆಯಲ್ಲಿ ಕಿತಾಬ–ಎ–ನವರಸ್ ಎಂಬ ಪುಸ್ತಕವನ್ನು ರಚಿಸಿದ್ದಾನೆ. ಇವನು ಕ್ರಿ.ಶ. 1580 ರಿಂದ 1626ರ ವರೆಗೆ ಆಳ್ವಿಕೆ ಮಾಡಿದನು. ಪ್ರಸಿದ್ಧವಾದ ಕಟ್ಟಡ ಇಬ್ರಾಹಿಂ ರೋಜಾವನ್ನು ಕಟ್ಟಿಸಿದನು.

7. ಮಹಮ್ಮದ ಆದಿಲ್‌ಶಾಹ

ಪ್ರಸಿದ್ದವಾದ ಗೋಲಗುಮ್ಮಟವನ್ನು ಕಟ್ಟಿಸಿದ ಕೀರ್ತಿ ಮಹಮ್ಮದ್ ಆದಿಲ್‌ಶಾಹನಿಗೆ ಸಲ್ಲುತ್ತದೆ. ಕ್ರಿ.ಶ. 1626ರಲ್ಲಿ ಸಿಂಹಾಸನವನ್ನೇರಿ ಕ್ರಿ.ಶ. 1658ರ ವರೆಗೆ ಆಳ್ವಿಕೆಯನ್ನು ಮಾಡಿದನು. ಇವನ ಅಧಿಕಾರವಾಧಿಯಲ್ಲಿ ಹೆಸರಾಂತ ಸೇವಕ ಅಫ್ಜಲ್‌ಖಾನ್ ಇದ್ದನು.

8. ಎರಡನೆ ಅಲಿ ಆದಿಲ್‌ಶಾಹ

ಕ್ರಿ.ಶ. 1656 ರಿಂದ 1672ರ ವರೆಗೆ ಆಳ್ವಿಕೆ ಮಾಡಿದ ಎರಡನೆ ಅಲಿ ಆದಿಲ್‌ಶಾಹ ಇವನು ಅನೇಕ ಕಟ್ಟಡಗಳನ್ನು ಕಟ್ಟಿಸಿದ್ದು ಅದರಲ್ಲಿ ಬಾರಾಕಮಾನ್ ಕಟ್ಟಡ ಪ್ರಸಿದ್ದವಾಗಿದೆ.

9. ಸಿಕಂದರ್ ಆದಿಲ್‌ಶಾಹ

ಕೊನೆಯ ಅರಸ ಸಿಕಂದರ್ ಆದಿಲ್‌ಶಾಹ ಕ್ರಿ.ಶ. 1672 ರಿಂದ 1686ರ ವರಗೆ ಆಳ್ವಿಕೆ ಮಾಡಿದನು. ಇವನು ಅಧಿಕಾರ ನಡೆಸಿಕೊಂಡು ಹೋಗುವಲ್ಲಿ ದುರ್ಬಲನಾಗಿದ್ದುದರಿಂದ ಸಾಮ್ರಾಜ್ಯದ ಅವನತಿಗೆ ಕಾರಣವಾಯಿತು. ಮೊಘಲ್ ಸಾಮ್ರಾಜ್ಯದ ಅರಸ ಔರಂಗಜೇಬನು ಇವನನ್ನು ತನ್ನ ವಶಕ್ಕೆ ಪಡೆದುಕೊಂಡನು.

ಬುರ್ಜ್‌ಗಳು :

ಶಾಸನ ಸಂಖ್ಯೆ 117 ಬಿಜಾಪುರ ಜಿಲ್ಲೆಯ ಅರಕ್‌ಕಿಲ್ಲೆಯ ದಕ್ಷಿಣದ ಬಾಗಿಲ ಮೇಲೆ ಅರೇಬಿಕ್ ಮತ್ತು ಪರ್ಶಿಯನ್ ಭಾಷೆಯಲ್ಲಿ ಶಾಸನ ರಚಿತವಾಗಿದೆ. ಒಂದನೆ ಇಬ್ರಾಹಿಂ ಆದಿಲ್‌ಶಾಹನ ಕಾಲದಲ್ಲಿ ಆ.ಹಿ. 945 ಎಂದರೆ ಕ್ರಿ.ಶ. 1538–39ರಲ್ಲಿ ಬುರ್ಜ್‌ನ ಕಟ್ಟಡ ನಿರ್ಮಾಣ ಪೂರ್ಣ ಮಾಡಲಾಯಿತು.[1]

ಷಾರ್ಜಾ ಬುರ್ಜ್

ಎರಡನೆ ಅಲಿ ಆದಿಲ್‌ಶಾಹನ ಕಾಲಾವಧಿಯಲ್ಲಿ ಸೇವಕ ಮಂಜಲೇಷಾನು ಷಾರ್ಜಾ ಬುರ್ಜ್‌ನ್ನು ಆ.ಹಿ. 1069 ಕ್ರಿ.ಶ. 1658ರಲ್ಲಿ ಐದು ತಿಂಗಳ ಅವಧಿಯಲ್ಲಿ ಬುರ್ಜ್‌ನ್ನು ನಿರ್ಮಾಣ ಮಾಡಿದ್ದಾನೆಂದು ಪರ್ಶಿಯನ್ ಭಾಷೆಯಲ್ಲಿ ಶಾಸನ ಸಂಖ್ಯೆ 149ರಲ್ಲಿ ವಿಷಯ ಉಲ್ಲೇಖಿಸಲಾಗಿದೆ. ಷಾರ್ಜಾ ಬುರ್ಜ್‌ನಲ್ಲಿಯೇ ಶಾಸನ ದೊರೆತಿದೆ.[2] ಈ ಬುರ್ಜ್‌ಗೆ ಸಿಂಹ ಕೊತ್ತಳವೆಂತಲೂ ಕರೆಯುತ್ತಾರೆ. ಈ ಬುರ್ಜ್‌ಗೆ ಹೊಂದಿಕೊಂಡಿರುವ ಹಾಗೂ ಬಿಜಾಪುರ ಜಿಲ್ಲೆಯಲ್ಲಿಯೇ ಪ್ರಸಿದ್ಧಿಯಾಗಿರುವ ಮಲ್ಲಿಕ್–ಎ–ಮೈದಾನ್ ಎಂಬ ಹೆಸರಿನ ತೋಪು "ರಣರಂಗದ ಒಡೆಯ" ಎಂದು ಅರ್ಥವನ್ನು ಕೊಡುವ ಈ ತೋಪು 'ಕ್ರಿ.ಶ. 1549 ರಲ್ಲಿ ಅಹಮ್ಮದ್‌ನಗರದಲ್ಲಿ ಟರ್ಕಿ ದೇಶದಿಂದ ನಿಜಾಮ್‌ಶಾಹಿ ವಂಶ ಸೇವಕನಾಗಿದ್ದ ಹಸನ್ ರೊಮಿಯ ಮಗ ಮಹಮ್ಮದ್'[3]ನಿಂದ ನಿರ್ಮಾಣವಾಗಿದೆ ಎಂದು ಶಾಸನದ ಮೇಲೆ ಪರ್ಶಿಯನ್ ಭಾಷೆಯಲ್ಲಿ ಬರೆಯಲಾಗಿದೆ. ಇನ್ನೊಂದು ಶಾಸನದ ಮೇಲೆ 'ನಿಜಾಮ್‌ಶಾಹಿ ಪ್ರವಾದಿಯವರ ವಂಶಕ್ಕೆ ಸೇರಿದವನು'[4] ಎಂದು ಪರ್ಶಿಯನ್‌ಭಾಷೆಯಲ್ಲಿ ಬರೆಯಲಾಗಿದೆ. ನಂತರ ಇದನ್ನು ಅಹಮ್ಮದ್‌ನಗರದಿಂದ ಬಿಜಾಪುರಕ್ಕೆ ಸ್ಥಳಾಂತರಿಸಿ 'ಕ್ರಿ.ಶ. 1565ರಲ್ಲಿ ಒಂದನೆ ಅಲಿ ಆದಿಲ್‌ಶಾಹ ಹಾಗೂ ವಿಜಯನಗರದ ರಾಯರಾಯನ ನಡುವೆ ನಡೆದ ತಾಳಿಕೋಟೆ ಯುದ್ಧದಲ್ಲಿ ತೋಪುಖಾನೆಗಳ ಮುಖ್ಯಸ್ಥನಾದ ರೊಮಿಖಾನ್‌ನಿಂದ'[5] ಈ ತೋಪನ್ನು ಬಳಸಲಾಯಿತು. ದೆಕ್ಕನಿನ ಶಾಹಿ ಸುಲ್ತಾನರು ಒಗ್ಗಟ್ಟಿನಿಂದ ಶತ್ರು ಪಡೆಯಾದ ರಾಮರಾಯನನ್ನು ಸೋಲಿಸಿದರು. ಯುದ್ಧ ಮುಗಿದ ನಂತರ ನಿಜಾಮ್‌ಶಾಹಿಯವರು ತಮ್ಮ ಮಲ್ಲಿಕ್–ಎ–ಮೈದಾನ್ ತೋಪನ್ನು ಪರಾಂಡಗೆ ತೆಗೆದುಕೊಂಡು ಹೋದರು. ನಂತರ ಮಹಮ್ಮದ್ ಆದಿಲ್‌ಶಾಹನ ಕಾಲದಲ್ಲಿ ನಿಜಾಮ್‌ಶಾಹಿರವರ ಜೊತೆ ಆತಂರಿಕ ಕಲಹಗಳು ಉದ್ಭವಿಸಿತ್ತು. ಆ ಸಮಯದಲ್ಲಿ 'ಮುರಾರಿ ಪೆರಾಂಡದಲ್ಲಿದ್ದನು, ಮಹಮ್ಮದ್ ಆದಿಲ್‌ಶಾಹನ ಆಜ್ಞೆಯ ಮೇರೆಗೆ ಕ್ರಿ.ಶ. 1632ರಲ್ಲಿ ಪೆರಾಂಡದಿಂದ ಬಿಜಾಪುರಕ್ಕೆ ತಂದು ಬುರ್ಜ್'[6]ನಲ್ಲಿ ಶಾಶ್ವತವಾಗಿರಿಸಲಾಯಿತು. ಈ ತೋಪ್‌ನ ವೈವಿಧ್ಯತೆಗೆ ಮನಸೋತ ಮೊಘಲ್ ಸಾಮ್ರಾಜ್ಯದ ಬಾದಶಾಹ ಆಲಂಗೀರ್ ಔರಂಗಜೇಬ್‌ನು ತೋಪಿನ ಮೇಲೆ 'ಕ್ರಿ.ಶ. 1685–86ರಲ್ಲಿ ಬಿಜಾಪುರವನ್ನು ಗೆದ್ದೆನೆಂದೂ ಹಾಗೂ ರಾಜ್ಯವು ತನ್ನ ವಶವಾಯಿತೆಂದೂ ಶಾಸನದ ಮೇಲೆ ಬರೆಸಿದ್ದಾನೆ.'[7]

ಫಿರಂಗಿ ಬುರ್ಜ್

ಒಂದನೆ ಅಲಿ ಆದಿಲ್‌ಶಾಹನ ಕಾಲಾವಧಿಯಲ್ಲಿ ಆ.ಹಿ. 984 ಕ್ರಿ.ಶ. 1576–77ರಲ್ಲಿ ಗುಲಾಮ ಯಫ್ರಷ್ ಖಾನ್‌ನು ಫಿರಂಗಿ ಬುರ್ಜ್‌ನ್ನು ಕಟ್ಟಿಸಿದನ್ನು ಪರ್ಶಿಯನ್ ಭಾಷೆಯಲ್ಲಿ ಶಾಸನ ವಿಷಯ ದಾಖಲಾಗಿದೆ. ಶಾಸನ ಸಂಖ್ಯೆ 130 ಬಿಜಾಪುರ ಕೋಟೆಯ ಫತೇ ದರವಾಜದ ಮೇಲೆ ಈ ಶಾಸನ ಅಳವಡಿಸಲಾಗಿದೆ.[8] ಶಾಸನ ಸಂಖ್ಯೆ 131 ಬಿಜಾಪುರ ಜಿಲ್ಲೆಯ ಕೋಟೆಯ

ಮೆಕ್ಕಾಗೇಟ್‌ನ ದಕ್ಷಿಣದಲ್ಲಿರುವ ಬುರ್ಜ್‌ನ ಮೇಲೆ ಪರ್ಶಿಯನ್ ಭಾಷೆಯಲ್ಲಿ ಶಾಸನ ರಚಿಸಲಾಗಿದೆ. ಆ.ಹಿ. 985 ಎಂದರೆ ಕ್ರಿ.ಶ. 1577–78ರಲ್ಲಿ ಒಂದನೆ ಅಲಿ ಆದಿಲ್‌ಶಾಹನ ಕಾಲದಲ್ಲಿ ಗುಲಾಮ ಯಫ್ರಷ್‌ಖಾನ್‌ನು ಫಿರಂಗಿ ಶಾಹಿ ಬುರ್ಜ್ ಕಟ್ಟಿಸಿದರ ಬಗ್ಗೆ ವಿಷಯ ದಾಖಲಾಗಿದೆ. ಈ ಶಾಸನದ ರಚನಕಾರ ಖಾಜಿ ಇಸ್ಮಾಯಿಲ್ ಆಗಿದ್ದಾನೆ.[9] ಎಂದು ಶಾಸನ ವಿವರಿಸುತ್ತದೆ.

ಹೈದರ್ ಬುರ್ಜ್

ಎರಡನೆ ಇಬ್ರಾಹಿಂ ಆದಿಲ್‌ಶಾಹನ ಆಡಳಿತಾವಧಿಯಲ್ಲಿ ಸಹಾಯಕ ಅಧಿಕಾರಿ ಹೈದರ್‌ಖಾನ್‌ನು ಹೈದರ್ ಬುರ್ಜ್‌ನು ಆ.ಹಿ. 991 ಎಂದರೆ ಕ್ರಿ.ಶ. 1583–84ರಲ್ಲಿ ಬಿಜಾಪುರದಲ್ಲಿ ಕಟ್ಟಿಸಿದನು. ಶಾಸನ ಸಂಖ್ಯೆ 132 ಶಾಸನ ಭಾಷೆ ಪರ್ಶಿಯನ್ ಆಗಿದೆ. ಈ ಬುರ್ಜ್‌ನ ಇನ್ನೊಂದು ಹೆಸರು ಉಪಲಿ ಬುರ್ಜ್.[10] ನಗರದ ಮಧ್ಯಭಾಗದಲ್ಲಿ ದುಂಡಾಕಾರದಲ್ಲಿ ಎತ್ತರವಾಗಿ ಬುರ್ಜ್ ನಿರ್ಮಾಣ ಮಾಡಲಾಗಿದೆ. ಇದರ ಮೇಲೆ ಹೋಗಲು ಮೆಟ್ಟಿಲುಗಳನ್ನು ಕಟ್ಟಲಾಗಿದ್ದು ಮೇಲೆ ನಿಂತು ನೋಡಿದರೆ ನಗರದ ಸುಂದರ ದೃಶ್ಯವನ್ನು ನೋಡಲು ಸಾಧ್ಯವಾಗುತ್ತದೆ. ಹೈದರ್ ಬುರ್ಜ್‌ಗೆ ಉಪಲಿ ಬುರ್ಜ್ ಎಂದು ಕರೆಯಲು ಕಾರಣ ಕಾಲಕಳೆದಂತೆ ಇಲ್ಲಿ ಕುಳ್ಳುಗಳನ್ನು ಸುಡುತ್ತಿದ್ದರು ಹಾಗಾಗಿ ಇದಕ್ಕೆ ಉಪಲಿ ಬುರ್ಜ್‌ಯೆಂದು ಹೆಸರು ಬಂದಿದೆ. ಹೈದರ್‌ಖಾನ್‌ನು ಒಂದನೆ ಅಲಿ ಆದಿಲ್‌ಶಾಹ ಮತ್ತು ಎರಡನೆ ಇಬ್ರಾಹಿಂ ಆದಿಲ್‌ಶಾಹನ ಇಬ್ಬರು ಸುಲ್ತಾನರ ಕಾಲಾವಧಿಯಲ್ಲಿ ಸೇವಕನಾಗಿ ಸೇವೆ ಸಲ್ಲಿಸಿದ್ದಾನೆ. ಒಂದನೆ ಅಲಿ ಆದಿಲ್‌ಶಾಹನು ನಗರದ ಕೋಟೆಯನ್ನು ಕಟ್ಟಲು ಅದನ್ನು ಭಾಗ ಮಾಡಿ ಸೇವಕರಿಗೆ ಹಂಚಿದನು, ಆ ಸಮಯದಲ್ಲಿ ಹೈದರ್ ಖಾನ್‌ನು ಬಿಜಾಪುರದಲ್ಲಿರಲಿಲ್ಲ, ಕೋಟೆಯ ನಿರ್ಮಾಣದ ನಂತರ ನಗರಕ್ಕೆ ಮರಳಿದನು. ಆಗ ಕೋಟೆಯ ಕೆಲಸದಲ್ಲಿ ತನ್ನ ಸೇವೆಯಿಲ್ಲವೆಂದು ನೊಂದುಕೊಂಡ ಹೈದರ್‌ಖಾನ್‌ಗೆ ಅಲಿ ಆದಿಲ್‌ಶಾಹ ಬುರ್ಜ್‌ನ್ನು ಕಟ್ಟುವ ಕೆಲಸ ನೀಡಿದನು. ಇವನು ತನ್ನ ಸುಲ್ತಾನನ ಆಜ್ಞೆಯ ಮೇರೆಗೆ ಬುರ್ಜ್‌ನ್ನು ಕಟ್ಟಿಸಲು ಪ್ರಾರಂಭ ಮಾಡಿ ಎರಡನೆ ಇಬ್ರಾಹಿಂ ಆದಿಲ್‌ಶಾಹನ ಕಾಲದಲ್ಲಿ ನಿರ್ಮಾಣದ ಕೆಲಸವನ್ನು ಪೂರ್ಣಗೊಳಿಸಿದನು. ಇಲ್ಲಿ ಎರಡು ತೋಪುಗಳಲ್ಲಿ ಒಂದು ತೋಪು ದೊಡ್ಡದಾಗಿದ್ದು ಅದರ ಉದ್ದ 30.7 ಮತ್ತು ಗಾತ್ರದಲ್ಲಿ ಚಿಕ್ಕದಾದ ಇನ್ನೊಂದು ತೋಪಿನ ಉದ್ದ 19.10 ಆಗಿದೆ. ಈ ತೋಪುಗಳು ಇಂದಿಗೂ ಸಹ ಈ ಕಟ್ಟಡದಲ್ಲಿ ನಮಗೆ ನೋಡಲು ಸಿಗುತ್ತದೆ.

ಅಹಮ್ಮದ್ ಬುರ್ಜ್

ಸೇನಾಪಡೆಗಳ ಮುಖ್ಯಸ್ಥನಾದ ಅಹಮ್ಮದ್‌ಖಾನ್‌ನು ಆ.ಹಿ. 1053 ಎಂದರೆ ಕ್ರಿ.ಶ. 1643–44ರಲ್ಲಿ ಮಹಮ್ಮದ್ ಆದಿಲ್‌ಶಾಹನ ರಾಜಾಜ್ಞೆಯ ಮೇರೆಗೆ ಬುರ್ಜ್ ಕಟ್ಟಿಸಿ ಅದಕ್ಕೆ ಅಹಮ್ಮದ್ ಬುರ್ಜ್ ಎಂದು ಹೆಸರಿಟ್ಟನು. ಶಾಸನ ಸಂಖ್ಯೆ 142ರಲ್ಲಿ ಪರ್ಶಿಯನ್ ಭಾಷೆಯಲ್ಲಿ ವಿಷಯ ದಾಖಲಾಗಿದ್ದು ಶಾಸನ ಬಿಜಾಪುರದ ಶಹಾಪುರ ಗೇಟಿನಲ್ಲಿರಿಸಲಾಗಿದೆ.[11]

ಆದಿಲ್‌ಶಾಹಿ ಸಂಸ್ಥಾನದಲ್ಲಿಯೆ ಪ್ರಸಿದ್ಧಿಯಾದ ಅಫ್ಜಲ್‌ಖಾನ್‌ನು ಆ.ಹಿ. 1053 ಎಂದರೆ ಕ್ರಿ.ಶ. 1643–44ರಲ್ಲಿ ಸುಲ್ತಾನ ಮಹಮ್ಮದ್ ಆದಿಲ್‌ಶಾಹನ ಹೆಸರಲ್ಲಿ ಮಹಮ್ಮದ್ ಬುರ್ಜ್‌ನ್ನು ಕಟ್ಟಿಸಿ, ಶಾಸನ ವಿಷಯವನ್ನು ಪರ್ಶಿಯನ್ ಭಾಷೆಯಲ್ಲಿ ದಾಖಲಿಸಿದನು. ಶಾಸನ ಸಂಖ್ಯೆ 143 ಬಿಜಾಪುರದ ಮಲ್ಲಿಕ್ ಮೈದಾನದಲ್ಲಿ ದೊರೆತಿದೆ.[12]

ಶಾಸನ ಸಂಖ್ಯೆ 178 ಬಿಜಾಪುರ ಕೋಟೆಯ ಶಹಾಪುರ ಗೇಟಿನಲ್ಲಿ ಉತ್ತರದ ಅಹಮ್ಮದ್ ಬುರ್ಜ್‌ನಲ್ಲಿ ಪರ್ಶಿಯನ್ ಭಾಷೆಯಲ್ಲಿ ಶಾಸನ ದಾಖಲಾಗಿದೆ. ದಿವಾಣ ಹುದ್ದೆಯಲ್ಲಿದ್ದ ಅಲಿ ಸಂದರ್ ನುಸರತ್ ಷಾ ಸುಲ್ತಾನ ಖಾನ್–ಎ–ಖಾನ್‌ನ ಆಜ್ಞೆಯ ಮೇರೆಗೆ ಇರಾನ್‌ನಲ್ಲಿರುವ ಹಮ್‌ದಾನ್ ಬೆಟ್ಟದ ತರಹ ಎತ್ತರ ಭಾಗದಲ್ಲಿ ಮಹಮ್ಮದ್‌ಪುರ ಇದೆ ಎಂದು ಹೇಳಲಾಗಿದೆ.[13]

ಬುರ್ಜ್–ಎ–ನಿಯಾಮತ್

ಆ.ಹಿ. 1056 ಎಂದರೆ ಕ್ರಿ.ಶ. 1646–47ರಲ್ಲಿ ಮಹಮ್ಮದ್ ಆದಿಲ್‌ಶಾಹನ ಆಳ್ವಿಕೆ ಕಾಲದಲ್ಲಿ ಸೇವಕ ನಿಯಾಮತ್‌ಖಾನ್‌ನು ಬುರ್ಜ್‌ನ್ನು ಕಟ್ಟಿಸಿ ಅದಕ್ಕೆ 'ಬುರ್ಜ್–ಎ–ನಿಯಾಮತ್' ಎಂದು ಹೆಸರಿಟ್ಟನು. ಶಾಸನ ಸಂಖ್ಯೆ 146 ಬಿಜಾಪುರ ಜಿಲ್ಲೆಯ ಲಂಡೇ ಕಸ್ಸಾಬ್ ಬುರ್ಜ್‌ನ ಪಶ್ಚಿಮದಲ್ಲಿರುವ ನಾಲ್ಕನೇ ಬುರ್ಜ್‌ನಲ್ಲಿ ಪರ್ಶಿಯನ್ ಭಾಷೆಯಲ್ಲಿ ಶಾಸನ ದಾಖಲಾಗಿದೆ.[14]

ಲಂಡೇ ಕಸ್ಸಾಬ್ ಬುರ್ಜ್

ಶಾಸನ ಸಂಖ್ಯೆ 128 ದಕ್ಕನಿನ ದೊರೆಯಾಗಿದ್ದ ಎರಡನೆ ಅಲಿ ಆದಿಲ್‌ಶಾಹನ ಕಾಲದಲ್ಲಿ ಸೇವಕ ಮಲ್ಲಿಕ್ ಜಾಬಿತ್ ಖಾನ್‌ನು ಆ.ಹಿ. 1077 ಎಂದರೆ ಕ್ರಿ.ಶ. 1666–67ರಲ್ಲಿ ಲಂಡೇ ಕಸ್ಸಾಬ್ ಬುರ್ಜ್‌ನ ನಿರ್ಮಾಣ ಮಾಡಿದ್ದನ್ನು ಪರ್ಶಿಯನ್

ಭಾಷೆಯಲ್ಲಿ ಶಾಸನ ಸಂಖ್ಯೆ 170ರಲ್ಲಿ ಹೇಳಲಾಗಿದೆ.[15] ಒಂದನೆ ಅಲಿ ಆದಿಲ್‌ಶಾಹನ ಕಾಲದಲ್ಲಿ ಕೋಟೆಯ ಗೋಡೆಯಲ್ಲಿರುವ ಬುರ್ಜ್‌ನ ಮೇಲೆ ಬಿಜಾಪುರದಲ್ಲಿಯೆ ಅತಿ ದೊಡ್ಡದಾದ ತೋಪನ್ನು ಇರಿಸಲಾಗಿದ್ದು, 21, 22 ಅಡಿ ಉದ್ದವಿರುವ ಹಾಗೂ ಇದರ ಸುತ್ತಳತೆಯು 4.5 ಅಡಿ, ಇದರ ಭಾರ 49 ಟನ್ ಇದೆ, ಈ ತೋಪಿನ ಹೆಸರು ಲಂಡೇ ಕಸ್ಸಾಬ್ ಎಂದಿದ್ದು ಇದರ ಹಿನ್ನಲೆಯಿಂದ ಈ ಬುರ್ಜ್‌ಗೆ ಲಂಡೇ ಕಸ್ಸಾಬ್ ಎಂದು ಹೆಸರು ಬಂದಿರ ಬಹುದು ಎಂದೆನಿಸುತ್ತದೆ.

ಷಾರಾಫ್ ಬುರ್ಜ್

ಶಾಸನ ಸಂಖ್ಯೆ 141 ಪಾನಿ ಮಹಲಿಗೆ ಸಂಬಂಧಿಸಿದ ಈ ಶಾಸನವು ಪದ್ಯ ರೂಪದಲ್ಲಿ ಪರ್ಶಿಯನ್ ಭಾಷೆಯಲ್ಲಿ ರಚನೆಯಾಗಿದೆ. ಎರಡನೆ ಇಬ್ರಾಹಿಂ ಆದಿಲ್‌ಶಾಹನ ಅಧಿಕಾರಾವಧಿಯಲ್ಲಿ ಈ ಕಟ್ಟಡದ ಕೆಲಸ ಪ್ರಾರಂಭವಾಗಿ ಮಹಮ್ಮದ್ ಆದಿಲ್‌ಶಾಹನ ಕಾಲದಲ್ಲಿ ಆ.ಹಿ. 1051 ಎಂದರೆ ಕ್ರಿ.ಶ. 1641–42ರಲ್ಲಿ ಬುರ್ಜ್ ಸಂಪೂರ್ಣವಾಗಿ ನಿರ್ಮಾಣವಾಗಿ ಅದರ ಹೆಸರು ಷಾರಾಫ್ ಬುರ್ಜ್‌ಯೆಂದು ಹೆಸರಿಡಲಾಯಿತು.[16]

ಉಪಸಂಹಾರ :

ಶಾಸನಗಳಲ್ಲಿ ದಾಖಲಾಗಿರುವ ಬಿಜಾಪುರ ನಗರದ ಬುರ್ಜ್‌ಗಳನ್ನು ಮಾತ್ರ ಈ ಲೇಖನದಲ್ಲಿ ಉಲ್ಲೇಖಿಸಿದ್ದೇನೆ. ಬಿಜಾಪುರದಲ್ಲಿ ಆದಿಲ್‌ಶಾಹಿ ಕಾಲದ ಶಾಸನೋಕ್ತ ಬುರ್ಜ್‌ಗಳು ಸಹ ಇದಾವೆ. ಆದರೆ ಈ ನನ್ನ ಲೇಖನದಲ್ಲಿ ಶಾಸನಗಳನ್ನು ಹೊಂದಿದ ಬರ್ಜ್‌ಗಳ ಬಗ್ಗೆ ಶಾಸನಗಳ ಪ್ರಕಟಣಾ ವಿಷಯ ಹಾಗೂ ಅವು ಏನನ್ನು ಕುರಿತು ಮಾಹಿತಿ ನೀಡುತ್ತವೆ ಎಂಬುದನ್ನು ಅತ್ಯಂತ ಸಂಕ್ಷಿಪ್ತ ರೂಪದಲ್ಲಿ ಮಾಹಿತಿ ನೀಡುವ ಪ್ರಯತ್ನ ಮಾಡಿದ್ದೇನೆ. ನನ್ನ ಪಿಎಚ್.ಡಿ ಸಂಶೋಧನ ಮಹಾಪ್ರಬಂಧದಲ್ಲಿ ಇದರ ಪಠ್ಯದ ಕುರಿತು ವಿಶ್ಲೇಷಿಸಿ ಸಂಪೂರ್ಣವಾದ ಮಾಹಿತಿ ನೀಡುವ ಪ್ರಯತ್ನ ಮಾಡುತ್ತೇನೆ.

ಅಡಿ ಟಿಪ್ಪಣಿ :

01. ಯಾಸೀನ್ ಎಂ. ಖುದ್ದೂಸಿ, ಸೀತಾರಾಮ್ ಜಾಗೀರ್‌ದಾರ್, ಪ್ರಕಟಣೆ ವರ್ಷ 2001, ಕರ್ನಾಟಕದ ಪರ್ಶಿಯನ್, ಅರೇಬಿಕ್ ಮತ್ತು ಉರ್ದು ಶಾಸನಗಳು, ಪುಟ ಸಂಖ್ಯೆ – 89, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ.
02. ಯಾಸೀನ್ ಎಂ. ಖುದ್ದೂಸಿ, ಸೀತಾರಾಮ್ ಜಾಗೀರ್‌ದಾರ್, ಪ್ರಕಟಣೆ ವರ್ಷ 2001, ಕರ್ನಾಟಕದ ಪರ್ಶಿಯನ್, ಅರೇಬಿಕ್ ಮತ್ತು ಉರ್ದು ಶಾಸನಗಳು, ಪುಟ ಸಂಖ್ಯೆ–99, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ.
03. ಪಾಟೀಲ ಚನ್ನಬಸಪ್ಪ ಎಸ್. ಪ್ರಕಟಣೆ ವರ್ಷ 1999 ಕರ್ನಾಟಕ ಕೋಟೆಗಳು, ಸಂಪುಟ – 1, ಪುಟ ಸಂಖ್ಯೆ–152, ಪ್ರಸಾರಾಂಗ ಕನ್ನಡ ವಿಶ್ವ ವಿದ್ಯಾಲಯ ಹಂಪಿ.
04. ಯಾಸೀನ್ ಎಂ. ಖುದ್ದೂಸಿ, ಸೀತಾರಾಮ್ ಜಾಗೀರ್‌ದಾರ್, ಪ್ರಕಟಣೆ ವರ್ಷ 2001, ಕರ್ನಾಟಕದ ಪರ್ಶಿಯನ್, ಅರೇಬಿಕ್ ಮತ್ತು ಉರ್ದು ಶಾಸನಗಳು, ಪುಟ ಸಂಖ್ಯೆ–82, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ.
05. ಮಹಮ್ಮದ್ ಇಬ್ರಾಹಿಂ ಜುಬೇರಿ ವಿರಚಿತ ಬಸಾತೀನೆ ಸಲಾತೀನ, ಪ್ರಕಟಣೆ ವರ್ಷ 2014, ಆದಿಲ್‌ಶಾಹಿ ಸಾಹಿತ್ಯ ಸಂಪುಟ : 5, ಪುಟ ಸಂಖ್ಯೆ–95, ವಚನಪಿತಾಮಹ ಡಾ॥ ಫ.ಗು. ಹಳ್ಳಕಟ್ಟಿ ಸಂಶೋಧನ ಕೇಂದ್ರ, ಬಿ.ಎಲ್.ಡಿ.ಇ. ಸಂಸ್ಥೆ, ವಿಜಾಪುರ.
06. ಹನ್ರಿ ಕಜೀನ್ಸ ಎಂ.ಆರ್.ಎ.ಎಸ್., ವರ್ಷ 1889, ಬಿಜಾಪುರ್ ದಿ ಓಲ್ಡ್ ಕ್ಯಾಪಿಟಲ್ ಆಫ್ ದಿ ಆದಿಲ್ ಶಾಹಿ ಕಿಂಗ್ಸ್, ಪುಟ ಸಂಖ್ಯೆ–120, ಪೂನಾ ಪ್ರಿಂಟೇಡ್ ಅಟ್ ದಿ ಆರ್ಫಾನೇಜ್ ಪ್ರೇಸ್.
07. ಯಾಸೀನ್ ಎಂ. ಖುದ್ದೂಸಿ, ಸೀತಾರಾಮ್ ಜಾಗೀರ್‌ದಾರ್, ಪ್ರಕಟಣೆ ವರ್ಷ 2001, ಕರ್ನಾಟಕದ ಪರ್ಶಿಯನ್, ಅರೇಬಿಕ್ ಮತ್ತು ಉರ್ದು ಶಾಸನಗಳು, ಪುಟ ಸಂಖ್ಯೆ–115, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ.
08. ಯಾಸೀನ್ ಎಂ. ಖುದ್ದೂಸಿ, ಸೀತಾರಾಮ್ ಜಾಗೀರ್‌ದಾರ್, ಪ್ರಕಟಣೆ ವರ್ಷ 2001, ಕರ್ನಾಟಕದ ಪರ್ಶಿಯನ್, ಅರೇಬಿಕ್ ಮತ್ತು ಉರ್ದು ಶಾಸನಗಳು, ಪುಟ ಸಂಖ್ಯೆ–89, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ.
09. ಯಾಸೀನ್ ಎಂ. ಖುದ್ದೂಸಿ, ಸೀತಾರಾಮ್ ಜಾಗೀರ್‌ದಾರ್, ಪ್ರಕಟಣೆ ವರ್ಷ 2001, ಕರ್ನಾಟಕದ ಪರ್ಶಿಯನ್, ಅರೇಬಿಕ್ ಮತ್ತು ಉರ್ದು ಶಾಸನಗಳು, ಪುಟ ಸಂಖ್ಯೆ–90, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ.
10. ಯಾಸೀನ್ ಎಂ. ಖುದ್ದೂಸಿ, ಸೀತಾರಾಮ್ ಜಾಗೀರ್‌ದಾರ್, ಪ್ರಕಟಣೆ ವರ್ಷ 2001, ಕರ್ನಾಟಕದ ಪರ್ಶಿಯನ್, ಅರೇಬಿಕ್ ಮತ್ತು ಉರ್ದು ಶಾಸನಗಳು, ಪುಟ ಸಂಖ್ಯೆ–95, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ.
11. ಯಾಸೀನ್ ಎಂ. ಖುದ್ದೂಸಿ, ಸೀತಾರಾಮ್ ಜಾಗೀರ್‌ದಾರ್, ಪ್ರಕಟಣೆ ವರ್ಷ 2001, ಕರ್ನಾಟಕದ ಪರ್ಶಿಯನ್, ಅರೇಬಿಕ್ ಮತ್ತು ಉರ್ದು ಶಾಸನಗಳು, ಪುಟ ಸಂಖ್ಯೆ–96, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ.

12. ಯಾಸೀನ್ ಎಂ. ಖುದ್ದೂಸಿ, ಸೀತಾರಾಮ್ ಜಾಗೀರ್‌ದಾರ್, ಪ್ರಕಟಣೆ ವರ್ಷ 2001, ಕರ್ನಾಟಕದ ಪರ್ಶಿಯನ್, ಅರೇಬಿಕ್ ಮತ್ತು ಉರ್ದು ಶಾಸನಗಳು, ಪುಟ ಸಂಖ್ಯೆ–98, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ.
13. ಯಾಸೀನ್ ಎಂ. ಖುದ್ದೂಸಿ, ಸೀತಾರಾಮ್ ಜಾಗೀರ್‌ದಾರ್, ಪ್ರಕಟಣೆ ವರ್ಷ 2001, ಕರ್ನಾಟಕದ ಪರ್ಶಿಯನ್, ಅರೇಬಿಕ್ ಮತ್ತು ಉರ್ದು ಶಾಸನಗಳು, ಪುಟ ಸಂಖ್ಯೆ–118, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ.
14. ಯಾಸೀನ್ ಎಂ. ಖುದ್ದೂಸಿ, ಸೀತಾರಾಮ್ ಜಾಗೀರ್‌ದಾರ್, ಪ್ರಕಟಣೆ ವರ್ಷ 2001, ಕರ್ನಾಟಕದ ಪರ್ಶಿಯನ್, ಅರೇಬಿಕ್ ಮತ್ತು ಉರ್ದು ಶಾಸನಗಳು, ಪುಟ ಸಂಖ್ಯೆ–113, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ.
15. ಯಾಸೀನ್ ಎಂ. ಖುದ್ದೂಸಿ, ಸೀತಾರಾಮ್ ಜಾಗೀರ್‌ದಾರ್, ಪ್ರಕಟಣೆ ವರ್ಷ 2001, ಕರ್ನಾಟಕದ ಪರ್ಶಿಯನ್, ಅರೇಬಿಕ್ ಮತ್ತು ಉರ್ದು ಶಾಸನಗಳು, ಪುಟ ಸಂಖ್ಯೆ–100, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ.
16. ಯಾಸೀನ್ ಎಂ. ಖುದ್ದೂಸಿ, ಸೀತಾರಾಮ್ ಜಾಗೀರ್‌ದಾರ್, ಪ್ರಕಟಣೆ ವರ್ಷ 2001, ಕರ್ನಾಟಕದ ಪರ್ಶಿಯನ್, ಅರೇಬಿಕ್ ಮತ್ತು ಉರ್ದು ಶಾಸನಗಳು, ಪುಟ ಸಂಖ್ಯೆ–94, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ.

ಆಧಾರ ಗ್ರಂಥಗಳು :

1. ಯಾಸೀನ್ ಎಂ. ಖುದ್ದೂಸಿ, ಸೀತಾರಾಮ್ ಜಾಗೀರ್‌ದಾರ್, ಪ್ರಕಟಣೆ ವರ್ಷ 2001, ಕರ್ನಾಟಕದ ಪರ್ಶಿಯನ್, ಅರೇಬಿಕ್ ಮತ್ತು ಉರ್ದು ಶಾಸನಗಳು, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ.
2. ಪಾಟೀಲ ಚನ್ನಬಸಪ್ಪ ಎಸ್. ಪ್ರಕಟಣೆ ವರ್ಷ 1999 ಕರ್ನಾಟಕ ಕೋಟೆಗಳು, ಸಂಪುಟ – 1, ಪ್ರಸಾರಾಂಗ ಕನ್ನಡ ವಿಶ್ವ ವಿದ್ಯಾಲಯ ಹಂಪಿ.
3. ಮಹಮ್ಮದ್ ಇಬ್ರಾಹಿಂ ಜುಬೇರಿ ವಿರಚಿತ ಬಸಾತೀನೆ ಸಲಾತೀನ, ಪ್ರಕಟಣೆ ವರ್ಷ 2014, ಆದಿಲ್‌ಶಾಹಿ ಸಾಹಿತ್ಯ ಸಂಪುಟ : 5, ವಚನಪಿತಾಮಹ ಡಾ॥ ಫ.ಗು. ಹಳಕಟ್ಟಿ ಸಂಶೋಧನ ಕೇಂದ್ರ, ಬಿ.ಎಲ್.ಡಿ.ಇ. ಸಂಸ್ಥೆ, ವಿಜಾಪುರ.
4. ಹನ್ರಿ ಕಜೀನ್ಸ ಎಂ.ಆರ್.ಎ.ಎಸ್., ಪ್ರಕಟಣೆ ವರ್ಷ 1889, ಬಿಜಾಪುರ್ ದಿ ಓಲ್ಡ್ ಕ್ಯಾಪಿಟಲ್ ಆಫ್ ದಿ ಆದಿಲ್ ಶಾಹಿ ಕಿಂಗ್ಸ್, ಪೂನಾ ಪ್ರಿಂಟೇಡ್ ಅಟ್ ದಿ ಆರ್ಫಾನೇಜ್ ಪ್ರೇಸ್.
5. ಎ.ಎಂ. ಅಣ್ಣಿಗೇರಿ, ಪ್ರಕಟಣೆ ವರ್ಷ–1980 ವಿಜಾಪುರದ ಶಿಲ್ಪಾಕಲಾ ವೈಭವ, ಭವಾನೀ ಪ್ರಕಾಶನ, ಧಾರವಾಡ–7.
6. ಪ್ರಧಾನ ಸಂಪಾದಕರು ಡಾ. ಅ.ನ.ಕೃ., ಪ್ರಕಟಣೆ ವರ್ಷ–1971, ವಿಜಾಪುರ, ಐಬಿಎಚ್ ಪ್ರಕಾಶನ, ಗಾಂಧಿನಗರ, ಬೆಂಗಳೂರು 9.